III ಬೆಂಗಳೂರು ನೀರು ಸರಬರಾಜು ಮತ್ತು ಗ್ರಾಮಸಾರ ಚರಂಡಿ ವ್ಯವಸ್ಥೆ ಹಾಗೂ ಇತರೆ ಕೆಲವು ಕಾನೂನುಗಳು (ತಿದ್ದುಪಡಿ) ವಿಧೇಯಕ, 2009

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು (ವಸತಿ, ವಾರ್ತಾ, ಮಾಹಿತಿ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ಬೆಂಗಳೂರು ಜಲಮಂಡಳಿ ಸಚಿವರು) : ಮಾನ್ಯ ಅಧ್ಯಕ್ಷರೆ, 2009ರ ಬೆಂಗಳೂರು ನೀರು ಸರಬರಾಜು ಮತ್ತು ಗ್ರಾಮಸಾರ ಚರಂಡಿ ವ್ಯವಸ್ಥೆ ಹಾಗೂ ಇತರೆ ಕೆಲವು ಕಾನೂನುಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು : ಸನ್ಮಾನ್ಯ ಅಧ್ಯಕ್ಷರೆ, ಬೆಂಗಳೂರು ಜಲ ಮಂಡಳಿಯು 1964 ರಲ್ಲಿ ಅಸ್ತಿತ್ವಕ್ಕೆ ಬಂದಿದ್ದು, 1966 ಮತ್ತು 1984 ರಲ್ಲಿ ಕೆಲವು ತಿದ್ದುಪಡಿಗಳಾಗಿವೆ. ನಂತರ, ಬೆಂಗಳೂರಿನ ವಿಸ್ತಾರ ಬಹಳಷ್ಟು ಜಾಸ್ತಿಯಾಗಿದೆ ಮತ್ತು ಇಲ್ಲಿ ಬಹು ಅಂತಸ್ತಿನ ಕಟ್ಟಡಗಳು ಬಹಳಷ್ಟು ಬಂದಿವೆ. ಆವತ್ತಿನ ಕಾನೂನಿನಲ್ಲಿ ನಾವು ಕೆಲವು ಶುಲ್ಕವನ್ನು ವಿಧಿಸುವುದಕ್ಕೆ ಮತ್ತು ನೀರನ್ನು ಕಳ್ಳತನ ಮಾಡುವವರಿಗೆ ಜುಲ್ಮಾನೆ ಹಾಕುವುದಕ್ಕೆ ಕಡಿಮೆ ಪ್ರಮಾಣದಲ್ಲಿ ಅಂದರೆ ಒಂದು ದಿವಸಕ್ಕೆ ಐದು ರೂಪಾಯಿ ಎಂದು ಇತ್ತು. ಅದನ್ನು ಹೆಚ್ಚಿಸಬೇಕು, ನೀರನ್ನು ಕದಿಯುವವರಿಗೆ ಶಿಕ್ಷೆಯಾಗಬೇಕು ಮತ್ತು ಇದರಲ್ಲಿ ಶಾಮೀಲಾಗುವ ಅಧಿಕಾರಿಗಳ ಮೇಲೆ ಕೂಡ ಕ್ರಮವನ್ನು ತೆಗೆದುಕೊಳ್ಳಬೇಕು ಎಂದು ನಾವು ಈ ತಿದ್ದುಪಡಿಯನ್ನು ತಂದಿದ್ದೇವೆ. ಬಹು ಅಂತಸ್ತಿನ ಕಟ್ಟಡಗಳ ಮೇಲೆ pro-rata charges ಹಾಕಲಿಕ್ಕೆ ನಮಗೆ ಅಧಿಕಾರ ಇರಲಿಲ್ಲ. ಅದ್ನನು ನಾವು ಈ ಕಾನೂನಿನ ತಿದ್ದುಪಡಿಯಲ್ಲಿ ತಂದಿದ್ದೇವೆ. ಅದಲ್ಲದೇ, ಯಾರು ಅಕ್ರಮವಾಗಿ ಕಟ್ಟಡಗಳಿಗೆ ನೀರಿನ ಸಂಪರ್ಕ ತೆಗೆದು ಕೊಂಡಿರುತ್ತಾರೆ, ಅವರಿಗೆ sanitary connection cut ಮಾಡುವುದಕ್ಕೆ ಕೂಡ ನಮಗೆ ಅಧಿಕಾರ ಇರಲಿಲ್ಲ. ಅದನ್ನೂ ಕೂಡ ಈ ತಿದ್ದುಪಡಿಯಲ್ಲಿ ತಂದಿದ್ದೇವೆ. ಅದಲ್ಲದೇ, ನೀರಿನ ಕೊಳವೆಗಳ ಮೇಲೆ ಕೆಲವರು ಕಟ್ಟಡಗಳನ್ನು ಕಟ್ಟಿದ್ದಾರೆ. ಅದನ್ನು ನಿಯಂತ್ರಣ ಮಾಡಿ ಕೊಳವೆಗಳ ಪಕ್ಕದಲ್ಲಿ ಒಂದು

ಮೀಟರ್ ಬಿಟ್ಟು ಕಟ್ಟಡವನ್ನು ಕಟ್ಟಬೇಕು ಮತ್ತು ಕೆಳವೆಗಳ ಪಕ್ಕದಲ್ಲಿ ಒಂದು ಮೀಟರ್ ಬಿಟ್ಟು ಕಟ್ಟವನ್ನು ಕಟ್ಟಬೇಕು ಮತ್ತು ಕೆಳವೆಗಳ ಮೇಲೆ ಕಟ್ಟಿರುವ ಕಟ್ಟಡಗಳನ್ನು ಕೂಡಲೇ ತೆಗೆಯಬೇಕು ಎನ್ನುವುದರ ಬಗ್ಗೆ ಒಂದು ತಿದ್ದುಪಡಿಯನ್ನು ತಂದಿದ್ದೇವೆ. ಅದಲ್ಲದೇ, ಇವತ್ತು ಕೆಲವು ಭಾಗಗಳಲ್ಲಿ ಬೋರ್‌ವೆಲ್ ಮುಖಾಂತರ ನೀರನ್ನು ತೆಗೆದು ಅದನ್ನು tanker ಮೂಲಕ ಅನಧಿಕೃತವಾಗಿ ಸರಬರಾಜು ಮಾಡುತ್ತಿದ್ದಾರೆ. ಅದನ್ನು ನಿಯಂತ್ರಿಸಲು ಈಗ ನಮಗೆ ಅಧೀಕಾರ ಇಲ್ಲ. ನಾವು ಆ ಅಧಿಕಾರವನ್ನು ಪಡದುಕೊಂಡು, ಸ್ವಚ್ಛವಾದ ನೀರನ್ನು ಜನರಿಗೆ ಕೊಡಬೇಕು ಮತ್ತು ಅಂತರ್ಜಲವನ್ನು ಕಾಪಾಡಬೇಕು ಎನ್ನುವ ಉದ್ದೇಶದಿಂದ ಇದನ್ನು ತಂದಿದ್ದೇವೆ. ಮತ್ತು ಮಳೆ ಕೊಯ್ಲು ಪದ್ಧತಿಗೆ ನಾವು ಈಗಾಗಲೇ ಒಂದು ಕಾನೂನನ್ನು ಮಾಡಿದ್ದೇವೆ. ಅದನ್ನೂ ಕೂಡ ಮತ್ತೊಂದು ಸಾರಿ ಇದರಲ್ಲಿ ಸೇರಿಸಿ ಈ ಒಂದು ತಿದ್ದುಪಡಿ ವಿಧೇಯಕವನ್ನು ತಂದಿದ್ದೇವೆ. ಹಿಂದೆ, ಒಬ್ಬರು Chief Engineer-Water Supply, ಮತ್ತೊಬ್ಬರು Chief Engineer-Sanitary ಎಂದು ಇದ್ದರು. ಅದನ್ನು ತಿದ್ದುಪಡಿ ಮಾಡಿ Engineer-in-Chief ಎಂದು ಮಾಡುವುದಕ್ಕೆ ಹಾಗೂ administration ನಲ್ಲಿ ಕೆಲವು reforms ಮಾಡಿಕೊಳ್ಳುವುದಕ್ಕೆ ಈ ತಿದ್ದುಪಡಿಯನ್ನು ತಂದಿದ್ದೇವೆ. ಅನೇಕ ರೀತಿಯಲ್ಲಿ ಅವ್ಯವಸ್ಥೆಗಳು ನಡೆಯುತ್ತಿದ್ದಂಥ ಕಾಲದಲ್ಲಿ ಅದನ್ನು ತಡೆಯಲು ನಮಗೆ ಅಧಿಕಾರ ಇಲ್ಲದೇ ಇದ್ದ ಕಾರಣ್ಕಾಗಿ, ಆ ಅಧಿಕಾರಗಳನ್ನು ಪಡೆಯಲು ನಾವು ಆ ಮಾರ್ಪಾಡು ಗಳನ್ನು ತಂದಿದ್ದೇವೆ. ಈ ವಿಧೇಯಕವನ್ನು ಸಭೆ ಪರ್ಯಾಲೋಚಿಸಿ, ಅಂಗೀಕರಿಸಬೇಕು ಎಂದು ನಾನು ವಿನಂತಿಸಿಕೊಳ್ಳುತ್ತಿದ್ದೇನೆ.

ಶ್ರೀ ಡಿ.ಕೆ. ಶಿವಕುಮಾರ್ : ಮಾನ್ಯ ಅಧ್ಯಕ್ಷರೆ, ಇದನ್ನು ಇವರೊಬ್ಬರೇ ತಂದರೆ ಆಗುವುದಿಲ್ಲ. Local bodies ಎಲ್ಲವೂ ಸೇರಿ you should come out with a proper master plan on this. Local bodies, Corporations, Municipalities ನಿಮಗೆ co-operation ಕೊಡದಿದ್ದರೆ ಈ ಬಿಲ್‌ಗೆ ಏನೂ ಬೆಲೆ ಇರುವುದಿಲ್ಲ.

ಶ್ರೀ ಎಸ್. ಸುರೇಶ್ ಕುಮಾರ್ : ತಾವು ಹೇಳುವುದು ಸರಿ. B.W.S.S.B. ವ್ಯಾಪ್ತಿಯಲ್ಲಿ.

ಶ್ರೀ ಡಿ.ಕೆ. ಶಿವಕುಮಾರ್ : ಅವರೊಬ್ಬರಿಗೆ independent power, urban local bodies ಗೆ ಒಂದು power ಎನ್ನುವ ಹಾಗೆ ಮಾಡುವುದಕ್ಕಾಗುವುದಿಲ್ಲ.

ಶ್ರೀ ಎಸ್. ಸುರೇಶ್ ಕುಮಾರ್ : ಹಾಗೆ ಮಾಡುವುದಕ್ಕಾಗುವುದಿಲ್ಲ. B.W.S.S.B. is the sole authority to supply water unlike other places. ಇಲ್ಲಿ ನಮಗೆ ಸಮಸ್ಯೆ ಏನಾಗುತ್ತಿದೆ ಎಂದರೆ, unaccounted water ಮತ್ತು ಸೋರುವಿಕೆ. ಅವರು ಹೇಳಿದ ಹಾಗೆ ಈಗ ನಮ್ಮ ಹತ್ತಿರ ಅಧೀಕಾರ ಇಲ್ಲ. ಬಹಳ ದುರಂತ ಎಂದರೆ, ಬೆಂಗಳೂರು ನಗರದ ನಾಗರೀಕರಿಗೆ ನೀರಿನ ದರ ಗೊತ್ತು, ಆದರೆ ನೀರಿನ ಬೆಲೆ ಗೊತ್ತಿಲ್ಲ. They don't know the value of water. Value of water ಅವರಗೆ ಗೊತ್ತಾಗಬೇಕು ಎಂದರೆ ಸ್ವಲ್ಪವಾದರೂ ಕೂಡ corrot and stick ಎರಡೂ ಇರಬೇಕು. ಒಂದು incentive, ಇನ್ನೊಂದು disincentive. ಅದಕ್ಕೋಸ್ಕರ ಈ ಬಿಲ್ ತಂದಿದ್ದೇವೆ. ಬೇರೆ ಕಡೆಗಳಿಗೂ ಅನ್ವಯವಾಗುವಂತೆ, Karnataka Urban Water Supply ನಲ್ಲೂ ಕೂಡ ಇದೇ ರೀತಿಯ ಬಿಲ್ ತರುವುದಕ್ಕೆ ನಾವು move ಮಾಡುತ್ತೇವೆ.

ಶ್ರೀ ಡಿ.ಕೆ. ಶಿವಕುಮಾರ್ : Regulatory authority ಅಂದರೆ corporations ಇರುವ Powers, Local bodies ಗೆ ಇರುವ powers ಅನ್ನು ಕೂಡ ತೆಗೆದುಕೊಂಡು ನೀವು control ಮಾಡಿದರೆ ಮಾತ್ರ ಸಾಧ್ಯ. ಇಲ್ಲದಿದ್ದರೆ ನಿಮ್ಮ BWSSB ಲೆಕ್ಕಕ್ಕೆ ಇಲ್ಲ.

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು : ಮಾನ್ಯ ಶಿವಕುಮಾರ್ ರವರು ಹೇಳಿದ ಹಾಗೆ ಇದು Bangalore Municipal Corporation Act 1949 ಗೆ ಅನುಗುಣವಾಗಿ ನಾವು ಇದೊಂದು ನಮ್ಮ BWSSB Act ಇತ್ತು. ಅದಾದಮೇಲೆ ಅದನ್ನು Corporation Act ಗೆ ಬದಲಾವಣೆ ಮಾಡಿ 1976 Act ಅನ್ನು ತಿದ್ದುಪಡಿ ಮಾಡಿಕೊಂಡಿದ್ದೆವು. ಅದರಂತೆ ಈಗ ಮಾನ್ಯ ಸುರೇಶ್‌ಕುಮಾರ್‌ರವರು ಏನು ಹೇಳಿದ್ದಾರೆ, ತಾವು ಹೇಳಿದ್ದು ಅಕ್ಷರಶಃ ಸರಿ ಇದೆ.

ಶ್ರೀ ಡಿ.ಕೆ. ಶಿವಕುಮಾರ್ : Local bodies, Corporators, MLA ಗಳು interfere ಆಗದಿದ್ದ ಹಾಗೆ ನೀವು separate ಆಗಿ Power ಇಟ್ಟುಕೊಳ್ಳಿ. ಆಗ ಏನಾದರೂ Control ಗೆ ಬರುತ್ತದೆ. ನೀವು ಅಲ್ಲಿ ಅವರಿಗೂ power ಕೊಟ್ಟುಬಿಟ್ಟು ಪುನಃ ನೀವೂ ಮಾಡುತ್ತೇವೆಂದರೆ ನಿಮ್ಮನ್ನು ಯಾರೂ care ಮಾಡುವವರಿರುವುದಿಲ್ಲ.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು : ತಾವು ಹೇಳಿರುವುದು ಸರಿ ಇದೆ. ಇದರ ಜೊತೆಗೆ ಕಾನೂನು ಸಚಿವರು ಈಗ ಹೇಳಿದರು. ಇದರ ಬಗ್ಗೆ ನಾವು ಸಾಕಷ್ಟು ದೀರ್ಘವಾಗಿ ಚರ್ಚೆ ಮಾಡಿದ್ದೇವೆ. ಖಂಡಿತವಾಗಿ ತಾವು ಹೇಳಿದ ಸಲಹೆಯನ್ನು ನಾವು ಅಲ್ಲಿ Municipality Act ಗೂ ಸಹ ತಿದ್ದುಪಡಿ ತರುತ್ತೇವೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ;

"2009ನೇ ಸಾಲಿನ ಬೆಂಗಳೂರು ನೀರು ಸರಬರಾಜು ಮತ್ತು ಗ್ರಾಮಸಾರ ಚರಂಡಿ ವ್ಯವಸ್ಥೆ ಹಾಗೂ ಇತರ ಕೆಲವು ಕಾನೂನುಗಳು (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು
ಖಂಡ 2 ರಿಂದ 33ರವರೆಗೆ

ಅಧ್ಯಕ್ಷರು " "ಖಂಡ 2ರಿಂದ 33ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ರಿಂದ 33ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

ಖಂಡ 1 ಇತ್ಯಾದಿ :

ಅಧ್ಯಕ್ಷರು : ಪ್ರಸ್ತಾವ ಏನೆಂದರೆ,

"ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು
(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಯನ್ನು ವಿಧೇಯಕಕ್ಕೆ ಸೇರಿಸಲಾಯಿತು)

ಪ್ರಸ್ತಾವದ ಅಂಗೀಕಾರ

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ವಸತಿ, ವಾರ್ತಾ, ಮಾಹಿತಿ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ಬೆಂಗಳೂರು ಜಲಮಂಡಳಿ ಸಚಿವರು) : ಮಾನ್ಯ ಅಧ್ಯಕ್ಷರೆ, 2009ನೇ ಸಾಲಿನ ಬೆಂಗಳೂರು ನೀರು ಸರಬರಾಜು ಮತ್ತು ಗ್ರಾಮಸಾರ ಚರಂಡಿ ವ್ಯವಸ್ಥೆ ಹಾಗೂ ಇತರೆ ಕೆಲವು ಕಾನೂನುಗಳು (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ;

"2009ನೇ ಸಾಲಿನ ಬೆಂಗಳೂರು ನೀರು ಸರಬರಾಜು ಮತ್ತು ಗ್ರಾಮಸಾರ ಚರಂಡಿ ವ್ಯವಸ್ಥೆ ಹಾಗೂ ಇತರ ಕೆಲವು ಕಾನೂನುಗಳು (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು.

IV ಕರ್ನಾಟಕ ಸರ್ಕಾರಿ ಉದ್ಯಾನವನಗಳ (ಸಂರಕ್ಷಣೆ) (ತಿದ್ದುಪಡಿ) ವಿಧೇಯಕ, 2009

ಪರ್ಯಾಲೋಚನಾ ಪ್ರಸ್ತಾವ